ಈ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡ ಮಹಾತ್ಮರು ಉದಿಸಿದ್ದಾರೆ.

ಸರ್ವಧರ್ಮ ಸಮ್ಮೇಳನದ ಕೊನೆಯ ಅಧಿವೇಶನದಲ್ಲಿ ಸ್ವಾಮಿ ವಿವೇಕಾನಂದರು ಸಮನ್ವಯ ಸಂದೇಶವನ್ನು ಹೀಗೆಂದು ಸ್ಪಷ್ಟವಾಗಿ ಸಾರಿದರು: "ಸಮನ್ವಯ ಸಂದೇಶದ ಮಹಾಭಾವನೆಯನ್ನು ನಾಗರಿಕತೆಗಳು ತಮ್ಮಲ್ಲಿ ಅರಗಿಸಿಕೊಳ್ಳದಿದ್ದರೆ, ಅವು ದೀರ್ಘಾಯುವಾಗುವ ಸಾಧ್ಯತೆ ಇಲ್ಲ. ಮತಾಂಧತೆ, ಅನ್ಯಮತ ದ್ವೇಷ, ಬಡಿದಾಟ, ಕಚ್ಚಾಟ, ರಕ್ತಪಾತ – ಇವುಗಳ ಅಂತ್ಯವಾಗದೆ ನಾಗರಿಕತೆ ತಲೆ ಎತ್ತಿ ನಿಲ್ಲದು."

"ಸರ್ವಧರ್ಮ ಸಮ್ಮೇಳನ ಜಗತ್ತಿಗೆ ಏನಾದರೂ ಪ್ರಕಟಪಡಿಸಿದ್ದರೆ ಅದು ಈ ವಿಚಾರವನ್ನೇ : ಪವಿತ್ರತೆ, ಪರಿಶುದ್ಧತೆ, ದಾನ ದಯೆಗಳು ಯಾವುದೇ ಒಂದು ಧರ್ಮದ ಸ್ವಂತ ಆಸ್ತಿಯಲ್ಲ, ಪ್ರತಿಯೊಂದು ಧರ್ಮವೂ ಅತ್ಯಂತ ಉದಾರಚರಿತರಾದ ಸ್ತ್ರೀ ಪುರುಷರನ್ನು ರೂಪಿಸಿದೆ. ಯಾರಾದರೂ ತನ್ನ ಧರ್ಮವೊಂದೇ ಉಳಿಯತಕ್ಕದ್ದು ಎಂಬ ಭ್ರಾಂತಿಯಲ್ಲಿದ್ದರೆ ಅವನ ವಿಷಯದಲ್ಲಿ ನನಗೆ ಅಪಾರವಾದ ಮರುಕವಿದೆ. ಅವರಿಗೆ ನಾನು ಹೇಳುವುದು ಇಷ್ಟೆ: 'ಯಾರು ಎಷ್ಟೇ ವಿರೋಧಿಸಿದರೂ ಪ್ರತಿಯೊಂದು ಧರ್ಮದ ಧ್ವಜದ ಮೇಲೂ ಬಹುಬೇಗ ಈ ಮಾತುಗಳು ಬರೆಯಲ್ಪಡುತ್ತವೆ: **'ಹೋರಾಟವಲ್ಲ, ಸೌಹಾರ್ದ; ವಿನಾಶವಲ್ಲ, ಸ್ವೀಕಾರ; ವೈಮನಸ್ಯವಲ್ಲ, ಸಾಮರಸ್ಯ ಮತ್ತು ಶಾಂತಿ.'** "

## ಮಹಾಧರ್ಮವೇ ಸರಿ

ಎಲ್ಲಾ ವ್ಹೀಲರ್ ವಿಲ್ ಕಾಕ್ಸ್ ಎಂಬ ಅಮೆರಿಕದ ಪ್ರಸಿದ್ಧ ಕವಯಿತ್ರಿ 'ನ್ಯೂಯಾರ್ಕ್ ಅಮೆರಿಕನ್' ಎಂಬ ಪತ್ರಿಕೆಯಲ್ಲಿ ಬರೆದ ಲೇಖನದ ಒಂದು ಭಾಗ ಹೀಗಿದೆ:



"ಹಲವು ದಶಕಗಳ ಹಿಂದೆ ಒಂದು ಸಂಜೆ ಭಾರತದ ತತ್ತ್ವಬೋಧಕರಾದ ವಿವೇಕಾನಂದ ಎಂಬುವವರೊಬ್ಬರು ಉಪನ್ಯಾಸ ಮಾಡಲಿದ್ದಾರೆಂದು ಕೇಳಿತಿಳಿದೆ. ಕುತೂಹಲಗೊಂಡ ನಾನು ಮತ್ತು ನನ್ನ ಪತಿ – ಇಬ್ಬರೂ ಅಲ್ಲಿಗೆ ಹೋದೆವು. ಕಾರ್ಯಕ್ರಮ ಪ್ರಾರಂಭವಾಗಿ ಇನ್ನೂ ಹತ್ತು ನಿಮಿಷ ಆಗಿಲ್ಲ. ಆಗಲೇ ನಮಗೆ ಎಂಥ ಒಂದು ಅಪೂರ್ವವಾದ, ಚೈತನ್ಯಯುಕ್ತವಾದ ಅದ್ಭುತ ವಾತಾವರಣಕ್ಕೆ ಏರಿದ ಅನುಭವವಾಯಿತೆಂದರೆ, ಉಪನ್ಯಾಸದ ಕೊನೆಯವರೆಗೂ ಮೂಕವಿಸ್ಮಿತರಾಗಿ ಉಸಿರಾಡದೇ ಕುಳಿತುಬಿಟ್ಟೆವು."

ಉಪನ್ಯಾಸ ಮುಗಿದ ಮೇಲೆ ನಾವು ಜೀವನದ ಏರುಪೇರುಗಳನ್ನೆಲ್ಲ ಎದುರಿಸಬಲ್ಲ ಹೊಸ ಧೈರ್ಯದಿಂದ, ಹೊಸ ಭರವಸೆಯಿಂದ, ಹೊಸ ಶಕ್ತಿ ಉತ್ಸಾಹದಿಂದ ಹಿಂದಿರುಗಿದೆವು. ನನ್ನ ಪತಿ ಹೇಳಿದರು, "ದೇವರು, ಧರ್ಮ, ತತ್ತ್ವ – ಎಲ್ಲವೂ ಇದೇ!" ಅಲ್ಲಿಂದ ಮುಂದೆ ಸ್ವಾಮಿ ವಿವೇಕಾನಂದರು ಸನಾತನ ಧರ್ಮವನ್ನು ವಿವರಿಸುವುದನ್ನು ಕೇಳಲು ಮತ್ತು ಅದ್ಭುತ ರತ್ನಗಳಾದ ಶಕ್ತಿ, ಉತ್ಸಾಹದ ಆಲೋಚನೆಗಳನ್ನು ಪಡೆದುಕೊಳ್ಳಲು ನನ್ನ ಪತಿಯವರು ನನ್ನನ್ನು ಪ್ರತಿದಿನ ಕರೆದುಕೊಂಡು ಹೋಗುತ್ತಿದ್ದರು. ಪ್ರವಚನ ಮುಗಿದ ನಂತರ ಅಲ್ಲಿಂದ ಹೊರಟು ಚಳಿಗಾಲದ ಮುಸುಕಿನಿಂದ ಕೂಡಿದ ಬೀದಿಯಲ್ಲಿ ನಡೆದುಬರುತ್ತಿರುವಾಗ ಮುಗುಳ್ನಗುತ್ತ ಅವರು ಹೇಳುತ್ತಿದ್ದರು, "ಈಗ ಎಲ್ಲವೂ ಸರಿಯಾಗಿದೆ. ಚಿಂತಿಸಲು ಕಾರಣವಿಲ್ಲ" ಎಂದು. ನಾನು ಕೂಡ ಅದೇ ನಿರಾಳವಾದ ಮನಸ್ಸಿನಿಂದ ಮತ್ತು ವಿಶಾಲಗೊಂಡ ದೃಷ್ಟಿಯಿಂದ ನನ್ನ ಕೆಲಸಕಾರ್ಯಗಳಿಗೆ ಹಿಂದಿರುಗುತ್ತಿದ್ದೆ.

ಈ ಕಷ್ಟಕೋಟಲೆಗಳ ಯುಗದಲ್ಲಿ ಯಾವುದೇ ಧರ್ಮ, ಯಾವುದೇ ತತ್ತ್ವಶಾಸ್ತ್ರ ಇದನ್ನು ಮಾಡಬಲ್ಲುದಾದರೆ ಮತ್ತು ಇದರೊಂದಿಗೆ ಭಗವಂತನಲ್ಲಿನ ಶ್ರದ್ಧೆಯನ್ನು ತೀವ್ರಗೊಳಿಸಿ, ನಮ್ಮ ಸಹಮಾನವರ ಮೇಲಿನ ಸಹಾನುಭೂತಿಯನ್ನು ಹೆಚ್ಚಿಸಿ, ಮುಂಬರುವ ಜನ್ಮಗಳ ಕುರಿತಾಗಿ ಆನಂದದ ಭರವಸೆಯನ್ನು ನೀಡಬಲ್ಲುದಾದರೆ ಅದೊಂದು ಒಳ್ಳೆಯ ಧರ್ಮವಷ್ಟೇ ಅಲ್ಲ, ಮಹಾಧರ್ಮವೇ ಸರಿ."

## ಕಳಕಳಿಯ ಕರೆ

ಸ್ವಾಮೀಜಿ ಹೀಗೆ ಹೇಳುತ್ತಾರೆ: "ಈಗ ಸಾವಿರಾರು ವರ್ಷಗಳಿಂದ ಪರಕೀಯರು ಭಾರತೀಯರಾದ ನಮ್ಮನ್ನು ಒಂದೇ ಸಮನೆ, 'ನೀವು ದುರ್ಬಲರು, ನೀವು ಅಪ್ರಯೋಜಕರು, ನಿಮಗೆ ವ್ಯಕ್ತಿತ್ವ ಇಲ್ಲ' ಎಂದು ಹೇಳಿ ಹೇಳಿ, ಅದನ್ನು ನೀವು ಕೇಳಿ ಕೇಳಿ, ಈಗ 'ನಾವು ನಿಜಕ್ಕೂ ದುರ್ಬಲರೇ ಹೌದು' ಎಂದು ಒಪ್ಪಿಕೊಳ್ಳುವ ಸ್ಥಿತಿಗೆ ಬಂದಿದ್ದೀರಿ. ನನ್ನ ಈ ಶರೀರ ಕೂಡ ಇದೇ ಭಾರತಭೂಮಿಯಲ್ಲಿ ಜನ್ಮತಳೆದು, ಈ ಅನ್ನವನ್ನೇ ಉಂಡು ಬೆಳೆದಿದೆ. ಆದರೆ ನಾನು ಮಾತ್ರ ಎಂದೆಂದಿಗೂ ಒಂದು ಕ್ಷಣ ಮಾತ್ರವಾದರೂ, 'ನಾನು ದುರ್ಬಲ' ಎಂಬ ಭಾವನೆಯನ್ನು ನನ್ನ ಮನದ ಒಳಗೆ ಹೋಗಲು ಬಿಟ್ಟವನಲ್ಲ."

"ನನ್ನಲ್ಲಿ ನನಗೆ ಮೊದಲಿನಿಂದಲೂ ಅಪರಿಮಿತ ಆತ್ಮವಿಶ್ವಾಸವಿತ್ತು. ಈ ಪ್ರಬಲ ಆತ್ಮವಿಶ್ವಾಸದಿಂದಾಗಿ ಮತ್ತು ಭಗವತ್ಕೃಪೆಯಿಂದಾಗಿ, ಯಾವ ಪರರಾಷ್ಟ್ರೀಯರು ನಮ್ಮನ್ನು ದುರ್ಬಲರು, ದಲಿತರು ಎಂಬ ನಿಕೃಷ್ಟ ದೃಷ್ಟಿಯಿಂದ ನೋಡುತ್ತಿದ್ದರೊ, ಅವರೇ ನನ್ನನ್ನು ಇಂದು ಗುರುವಾಗಿ ಸ್ವೀಕರಿಸಿ ಗೌರವಿಸುತ್ತಿದ್ದಾರೆ. ನೀವು ಸಹ ನನ್ನಂತೆಯೇ ಆತ್ಮಶ್ರದ್ಧೆಯುಳ್ಳವರಾದರೆ, ನಿಮ್ಮೊಳಗೂ ಅನಂತ ಬಲವಿದೆ ಎಂದು ನೀವು ದೃಢವಾಗಿ ನಂಬಿದ್ದೇ ಆದರೆ, ನಿಮ್ಮೊಳಗೂ ಅಪರಿಮಿತ ಜ್ಞಾನ, ಅದಮ್ಯ ಶಕ್ತಿ ಅಡಗಿದೆಯೆಂದು ತಿಳಿದುದೇ ಆದರೆ ಮತ್ತು ಆ ಶಕ್ತಿಯನ್ನು ಜಾಗೃತಗೊಳಿಸಿಕೊಂಡುದೇ ಆದರೆ, ನೀವು ನನ್ನಂತೆಯೇ ಆಗುವಿರಿ, ಅದ್ಭುತಗಳನ್ನು ಸಾಧಿಸುವಿರಿ. ಹೆದರಬೇಡಿ ನಾನಿದ್ದೇನೆ, ನಿಮಗೆ ಶಕ್ತಿಪಾತವನ್ನು ಕಲಿಸುವುದಕ್ಕಾಗಿಯೇ.

ನನ್ನ ಸ್ವಂತ ಜೀವನದ ಮೂಲಕ ನಿಮಗದನ್ನು ತೋರಿಸಿಕೊಡುವ ಸಲುವಾಗಿಯೇ ನಾನು ನಿಮ್ಮಲ್ಲಿಗೆ ಬಂದಿದ್ದೇನೆ. ನನ್ನಿಂದ ನೀವು ಆ ಪರಮ ಸತ್ಯವನ್ನು ಕಲಿಯಲೇಬೇಕು. ಬಳಿಕ ನೀವು ನಗರದಿಂದ ನಗರಕ್ಕೆ, ಗ್ರಾಮದಿಂದ ಗ್ರಾಮಕ್ಕೆ, ಮನೆಯಿಂದ ಮನೆಗೆ ಹೋಗಿ ಈ ದಿವ್ಯಸತ್ಯವನ್ನು ಪ್ರಸಾರ ಮಾಡಬೇಕು. ಹೋಗಿ ಪ್ರತಿಯೊಬ್ಬ ಭಾರತೀಯನಿಗೂ ಸಾರಿ ಹೇಳಿ :

**"ಏಳಿ, ಎಚ್ಚರಗೊಳ್ಳಿ. ಕನಸು ಕಾಣುತ್ತಾ ಕುಳಿತಿರಬೇಡಿ. ಜಾಗೃತರಾಗಿ, ನಿಮ್ಮೊಳಗಣ ದಿವ್ಯತೆಯನ್ನು ಪ್ರಕಟಗೊಳಿಸಿ."**